# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ.:26 ಪ್ರಾ.ಸಾ. : 08**

| | | |
|---|---|---|
| ಸಾಕ್ಷಿಯ ಹೆಸರು | : | ರಮೇಶ ಲಮಾಣಿ |
| ತಂದೆಯ ಹೆಸರು | : | ಲೋಕೇಶ ಲಮಾಣಿ |
| ವಯಸ್ಸು | : | 30 ವರ್ಷ |
| ಕೆಲಸ | : | ಚಾಲಕ |
| ವಾಸ | : | ದಾಂಡೇಲಿ |

**ದಿನಾಂಕಃ 15-03-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ</u>**

1. ನಾನು ದಾಂಡೇಲಿಯ ಮಾರುತಿ ನಗದರಲ್ಲಿರುವ ನೀರಿನ ಟ್ಯಾಂಕಿನ ಹತ್ತಿರ ವಾಸವಾಗಿರುತ್ತೇನೆ. 2018 ರಲ್ಲಿ ನನ್ನ ಬಳಿ ಒಂದು ಮೋಟಾರ್ ಸೈಕಲ್ ನಂಃ ಕೆಎ-65/ಹೆಚ್-2843 ಇರುತ್ತದೆ. ಈಗ ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ 3 ನೇ ಆರೋಪಿ ನನಗೆ ಗೊತ್ತಿಲ್ಲ. ಈ ಹಿಂದೆ ನಾನು ಕಾರವಾರಕ್ಕೆ ಬಂದಾಗ ಹೆಲ್ಮೆಟ್ ಧರಿಸದ ಕಾರಣ ಕಾರವಾರ ಪೊಲೀಸರು ನನ್ನ ಮೋಟಾರ್ ಸೈಕಲ್ ನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಆ ನಂತರ ದಾಂಡೇಲಿಯಿಂದ ವಕೀಲರನ್ನು ಕರೆದುಕೊಂಡು ಬಂದು ಮೋಟಾರ್ ಸೈಕಲ್ ನ್ನು ಬಿಡಿಸಿಕೊಂಡಿರುತ್ತೇನೆ, ಆದರೆ ಈ ಪ್ರಕರಣದಲ್ಲಿ ಪೊಲೀಸರು ನನ್ನ ಮೋಟಾರ್ ಸೈಕಲ್ ನ್ನು ಜಪ್ತುಪಡಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಈ ಪ್ರಕರಣದ ಸ್ವತ್ತು ಪಟ್ಟಿ ನಂಃ 73/2018 ರಲ್ಲಿ ಜಪ್ತುಪಡಿಸಿಕೊಂಡ ಮೋಟಾರ್ ಸೈಕಲ್ ನಂಃ ಕೆಎ-65/ಹೆಚ್-2843 ವಿಚಾರಣೆಗಾಗಿ ಅವಶ್ಯಕತೆ ಇರುತ್ತದೆ ಎಂದು ತಿಳಿಸಿರುತ್ತಾರೆ. ಈ ಪ್ರಕರಣದ ಆದೇಶ ಪುಟಗಳನ್ನು ಪರಿಶೀಲಿಸಲಾಗಿ ದಿಃ 10-12-2019 ರಂದು ಚಾಸಾ-26 ರವರು ನ್ಯಾಯಾಲಯದಿಂದ ಬಿಡಿಸಿಕೊಂಡು ಹೋಗಿರುವುದು ಕಂಡುಬಂದಿರುತ್ತದೆ. ಸಾಕ್ಷಿಗೆ ವಿಚಾರಿಸಲಾಗಿ ತಾನು ಸದರಿ ಬೈಕ್ ನ್ನು ಈ ದಿನ ನ್ಯಾಯಾಲಯಕ್ಕೆ ತಂದಿರುವುದಿಲ್ಲ ಎಂದು ಹೇಳಿದ್ದು, ಸದರಿ ಬೈಕ್ ನ್ನು ನ್ಯಾಯಾಲಯಕ್ಕೆ

ವಿಚಾರಣೆ ಕಾಲದಲ್ಲಿ ಹಾಜರುಪಡಿಸುವಂತೆ ಸೂಚನೆ ನೀಡಿದಾಗ, ತಂದು ಹಾಜರುಪಡಿಸುವಂತೆ ತಿಳಿಸಲಾಯಿತು.)

**<u>ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ